15 ಸೆಲ ನಿ-72
63

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಪ್ರತಾಪ್ ಸಿಂಹನಾಯಕ್ ಕೆ. ಇವರು ನಿಯಮ-72 ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ 63ಕ್ಕೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:-** ರಾಜ್ಯದ ಅರಣ್ಯ ಒತ್ತುವರಿ ಪ್ರಕರಣಗಳಲ್ಲಿ, ನಿಗಧಿತ ಅವಧಿಯೊಳಗೆ ಅರಣ್ಯ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ವ್ಯವಸ್ಥಿತವಾಗಿ ಹಾಗೂ ಯೋಜನಾಬದ್ಧವಾಗಿ ಜಂಟಿ ಸರ್ವೆ ಮಾಡಿ ಪರಿಹಾರ ಹುಡುಕದ ಕಾರಣದಿಂದಾಗಿ ಹಲವಾರು ಅರ್ಹ ಅರಣ್ಯ ಒತ್ತುವರಿದಾರರಿಗೆ ನ್ಯಾಯ ದೊರಕದೆ ಇಂದಿಗೂ ತೊಂದರೆಯಾಗುತ್ತಾ ಬಂದಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:** ಅರಣ್ಯ ಒತ್ತುವರಿಗಳನ್ನು ತೆರವುಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಸಾಮಾನ್ಯವಾಗಿ ಕರ್ನಾಟಕ ಅರಣ್ಯ ಕಾಯ್ದೆ 1963 ರನ್ವಯ ಅರಣ್ಯ ಒತ್ತುವರಿದಾರರಿಗೆ ಒತ್ತುವರಿಯಾದ ಪ್ರದೇಶದ ಕುರಿತು ಅಗತ್ಯ ಕಂದಾಯ ದಾಖಲೆಗಳಿದ್ದಲ್ಲಿ ಅವುಗಳನ್ನು ಒದಗಿಸಲು ತಿಳಿಸಲಾಗುತ್ತದೆ.

ಅರಣ್ಯ ಒತ್ತುವರಿದಾರರು ಸದರಿ ಒತ್ತುವರಿ ಪ್ರದೇಶದಮೇಲೆ ತಮ್ಮ ಹಕ್ಕು/ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಅಧಿಕೃತ ದಾಖಲೆಗಳನ್ನು ಒದಗಿಸಲು / ಹಾಜರುಪಡಿಸಲು ವಿಫಲರಾದಲ್ಲಿ ಅಂಥಹ ಒತ್ತುವರಿಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮಗಳು 1969 ರನ್ವಯ ತೆರವುಗೊಳಿಸಲಾಗುತ್ತದೆ.

ಒಂದು ವೇಳೆ ಅರಣ್ಯ ಒತ್ತುವರಿದಾರರು ಒತ್ತುವರಿ ಪ್ರದೇಶಕ್ಕೆ ಸಂಬಂಧಿಸಿದಂತೆ ಮತ್ತು ಸದರಿ ಪ್ರದೇಶದ ಮೇಲೆ ತಮ್ಮ ಹಕ್ಕು/ ಮಾಲೀಕತ್ವವನ್ನು ಸಾದರಪಡಿಸುವ ಕಂದಾಯ ದಾಖಲೆಗಳನ್ನು ಒದಗಿಸಿದಲ್ಲಿ / ಹಾಜರುಪಡಿಸಿದಲ್ಲಿ ಅಂಥ ಪ್ರಕರಣಗಳನ್ನು ಪರಿಶೀಲಿಸಿ, ಅಗತ್ಯವಿದ್ದರೆ ಕಂದಾಯ ಇಲಾಖೆಯೊಂದಿಗೆ ಜಂಟಿ ಮೋಜಣಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಇಲಾಖೆಯ ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರ ವೃಂದದ ಅಧಿಕಾರಿಗಳು ತರಬೇತಿ ಹೊಂದಿರುವ ಮೋಜಣಿದಾರರಾಗಿದ್ದು, ಸಾಮಾನ್ಯವಾಗಿ ಸದರಿ ಜಂಟಿ ಮೋಜಣಿ ಕಾರ್ಯದಲ್ಲಿ ಕಂದಾಯ ಇಲಾಖೆಯ ಮೋಜಣಿದಾರರೊಂದಿಗೆ ಮೋಜಣಿ ಕಾರ್ಯವನ್ನು ನಿರ್ವಹಿಸುತ್ತಾರೆ.

ಈ ರೀತಿ ಕೈಗೊಳ್ಳಲಾಗುವ ಜಂಟಿ ಮೋಜಣಿಯ ಫಲಿತಾಂಶ / ವರದಿಯ ಆಧಾರದಲ್ಲಿ ಮುಂದಿನ ಅಗತ್ಯ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು.

ಕಂದಾಯ ಇಲಾಖೆಯೊಂದಿಗೆ ಜಂಟಿ ಮೋಜಣಿಗಾಗಿ ಮಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಮನವಿಗಳ ವಿಭಾಗವಾರು ಮಾಹಿತಿಯು ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ವಿಭಾಗ | ಜಂಟಿ ಮೋಜಣಿಗಾಗಿ ಸ್ವೀಕೃತಿಯಾಗಿರುವ ಅರ್ಜಿಗಳ ಸ್ಥಿತಿ -ಗತಿ. | | | | ಷರಾ |
|---|---|---|---|---|---|---|
| | | ಸ್ವೀಕೃತಿಯಾಗಿರುವ ಒಟ್ಟು ಅರ್ಜಿಗಳು | ಪ್ರಾರಂಭಿಸಲಾದ ಜಂಟಿ ಮೋಜಣಿ | ಪ್ರಾರಂಭಿಸಬೇಕಾದ ಜಂಟಿ ಮೋಜಣಿ | ಪೂರ್ಣಗೊಂಡಿರುವ ಜಂಟಿ ಮೋಜಣಿ | |
| 1. | ಮಂಗಳೂರು | 36 | 24 | 7 | 5 | 7 ಪ್ರಕರಣಗಳಿಗೆ ಜಂಟಿ ಸರ್ವೆ ಕೈಗೊಳ್ಳಲು ಕಂದಾಯ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ. |
| 2. | ಕುಂದಾಪುರ | 0 | 0 | 0 | 0 | |
| 3. | ಕುದುರೆ ಮುಖ ವನ್ಯಜೀವಿ ವಿಭಾಗ, ಕಾರ್ಕಾಳ | 0 | 0 | 0 | 0 | |
| | **ಒಟ್ಟು** | **36** | **24** | **7** | **5** | |

**ಸಂಖ್ಯೆ:FEE/ 82 /FGL /2023**

**(ಈಶ್ವರ ಬಿ.ಖಂಡ್ರೆ)**

ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು